3. ಇತರೆ ವೆಚ್ಚ ಪ್ರತಿ ಮಾಹೆ ರೂ. 40/–
4. ಕ್ಷೌರದ ವೆಚ್ಚ ವಾರ್ಷಿಕ ರೂ. 50/–
5. ಪಠ್ಯಪುಸ್ತಕ ಮತ್ತು ಸ್ಟೇಷನರಿ ವೆಚ್ಚ ವಾರ್ಷಿಕ ರೂ. 250/–
6. ಹಾಸಿಗೆ ಹೊದಿಕೆ – 3 ವರ್ಷಕ್ಕೊಮ್ಮೆ ರೂ. 350/–

ಮೆಟ್ರಿಕ್ ಸರ್ಕಾರದ ವಿದ್ಯಾರ್ಥಿನಿಲಯ

ಭೋಜನಾ ವೆಚ್ಚ ಮಾಹೆಯಾನ ರೂ. 450/–

ಆ) ಯಿಂದ ಈ)

ಇಲ್ಲ, ಸಧ್ಯಕ್ಕೆ ವಿದ್ಯಾರ್ಥಿವೇತನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆಯು ಸಧ್ಯಕ್ಕೆ ಇರುವುದಿಲ್ಲ.

ಉ) ಯಿಂದ ಊ)

ಆಯವ್ಯಯದ ಅನುದಾನದ ಲಭ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಾಲಕಾಲಕ್ಕೆ ಹೆಚ್ಚುವರಿಗೊಳಿಸಲಾಗುತ್ತದೆ.

...

442 (655) : ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಗೆ ಕಾವೇರಿ ನದಿಯಿಂದ ಕುಡಿಯುವ ನೀರು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಎಂದಿನಿಂದ ಅದನ್ನು ಜಾರಿಗೆ ತರಲಾಗುವುದು;

ಇ) ಈ ಯೋಜನೆಗೆ ನಿಗದಿಪಡಿಸಿರುವ ಮೊತ್ತವೆಷ್ಟು;

ಈ) ಇದನ್ನು ಪೂರೈಸಲು ಎಷ್ಟು ಸಮಯಾವಕಾಶ ಬೇಕಾಗಿದೆ; (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪ್ರಸ್ತುತ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

...

443 (543) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

ಅ) ರಾಜ್ಯದಲ್ಲಿರುವ ಗ್ರಾಮಪಂಚಾಯ್ತಿಗಳಿಗೆ ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ನೀಡಿರುವ ಅನುಧಾನ ಎಷ್ಟು?

ಆ) ನಿಗದಿಪಡಿಸದಕ್ಕಿಂತ ಕಡಿಮೆ ಅನುದಾನ ನೀಡಿರುವುದರಿಂದ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;